# ಮೂರು ಅಲೌಕಿಕ ಘಟನೆಗಳು

ಬಂಗಾಳಿ ಮೂಲ: ಶ್ರೀಶಚಂದ್ರ ಸನ್ಯಾಲ್

ನನಗೆ ಪರಿಚಿತರಾದ, ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದ ಶ್ರೀಶಚಂದ್ರ ಘಟಕ್ ಅವರಿಂದ ಶ್ರೀಮಾತೆಯವರಿಗೆ ಸಂಬಂಧಪಟ್ಟ ಮೂರು ಅಲೌಕಿಕ ಘಟನೆಗಳನ್ನು ನಾನು ಕೇಳಿದ್ದೆ. ೧೯೧೦ರ ಜೇಷ್ಠ ಮಾಸ(ಮೇ ತಿಂಗಳು)ದಲ್ಲಿ ರಮಣೀ ಮೋಹನ ಭಟ್ಟಾಚಾರ್ಯ (ಸ್ವಾಮಿ ಜಗದಾನಂದ), ಶ್ರೀಶಚಂದ್ರ ಘಟಕ್, ಪ್ರಫುಲ್ಲ ಬಂದ್ಯೋಪಾಧ್ಯಾಯ ಮತ್ತು ಸುರೇಂದ್ರನಾಥ ಚಕ್ರವರ್ತಿ ಇವರು ಶ್ರೀಮಾತೆಯವರ ದರ್ಶನವನ್ನು ಪಡೆಯಲು ಜಯ ರಾಮಬಾಟಿಗೆ ಹೊರಟಿದ್ದರು. ಅವರಲ್ಲಿ ಒಬ್ಬರಿಗೆ ಮೊದಲೇ ಮಂತ್ರದೀಕ್ಷೆಯಾಗಿತ್ತು. ಉಳಿದ ಮೂವರಿಗೂ ಶ್ರೀಮಾತೆಯವ ರಿಂದ ಮಂತ್ರದೀಕ್ಷೆ ಪಡೆಯಲು ಆಸೆಯಿತ್ತು. ದೀಕ್ಷೆಗೆ ಮೊದಲು ಶ್ರೀಮಾತೆಯವರ ಅಲೌಕಿಕ ಶಕ್ತಿಯ ಪ್ರಕಾಶವನ್ನು ಒಂದಿಷ್ಟು ಕಾಣ ಬೇಕೆಂದು ಅವರಲ್ಲಿ ಇಬ್ಬರು ತುಂಬಾ ಆಸೆಪಟ್ಟಿದ್ದರು. ಶ್ರೀಮಾತೆ ಯವರ ಪಾದಗಳನ್ನು ಪೂಜಿಸಬೇಕೆಂಬ ಬಯಕೆಯಿಂದ ಅವರಿ ಬ್ಬರೂ ಒಂದು ದಿನ ಬೆಳಿಗ್ಗೆ ತಾವರೆ ಹೂಗಳನ್ನು ಸಂಗ್ರಹಿಸಲು ಹಳ್ಳಿಯ ರಸ್ತೆಯಲ್ಲಿ ಹೊರಟರು. ಆದರೆ ಹಳ್ಳಿಯಲ್ಲಿ ಎಲ್ಲೂ ಅವ ರಿಗೆ ತಾವರೆ ಹೂಗಳು ಸಿಗಲಿಲ್ಲ. ಹುಡುಕುತ್ತಾ ಅವರು ಸಮೀಪದ ಹಳ್ಳಿಯನ್ನು ತಲುಪಿದರು. ಆ ಗ್ರಾಮದ ಇನ್ನೊಂದು ತುದಿಯಲ್ಲಿ ಒಂದು ಸಣ್ಣ ಕೊಳವನ್ನು ಅವರು ಕಂಡರು. ಅಲ್ಲಿ ಅನೇಕ ತಾವರೆ ಹೂಗಳು ಅರಳಿದ್ದವು. ಆಗ ಜಯರಾಮಬಾಟಿಯಲ್ಲಿ ಆಗ ಭೀಕರ ವಾದ ಕಾಲಾ-ಇಜಾರ್ ಹಾಗೂ ಮಲೇರಿಯಾ ಜ್ವರದ ಹಾವಳಿ ಯಿತ್ತು. ಕೊಳಕ್ಕೆ ಇಳಿಯುವುದೇ ಬೇಡವೇ ಎಂದು ನಿಶ್ಚಯಿಸ ಲಾಗದೆ ಅವರು ಸ್ವಲ್ಪ ಹೊತ್ತು ಆಲೋಚಿಸುತ್ತಿದ್ದರು. ಅಷ್ಟರಲ್ಲಿ ಅಲ್ಲಿ ಒಬ್ಬಾಕೆ ವೃದ್ಧೆ ಬಂದಳು. ಅವಳೆಂದಳು, ''ಮಗೂ, ತಾವರೆ ಹೂ ಬೇಕೆ? ನಾನು ಕಿತ್ತುಕೊಡುತ್ತೇನೆ.'' ಹೀಗೆಂದ ಆ ವೃದ್ಧೆ ಕೊಳದಲ್ಲಿ ಇಳಿದು, ಅನೇಕ ತಾವರೆ ಹೂಗಳನ್ನು ಕಿತ್ತು, ಅವುಗಳನ್ನು ತಂದು ಅವರಿಬ್ಬರಿಗೆ ಕೊಟ್ಟಳು. ಅವರಿಗೆ ತುಂಬಾ ಆನಂದವಾಯಿತು. ಅವರು, ''ನಾವು ನಿಮಗೆ ಸ್ವಲ್ಪ ಹಣ ಕೊಡುತ್ತೇವೆ'' ಎಂದರು. ಆದರೆ ಅವರು ಹಣವನ್ನಿಟ್ಟಿದ್ದ ಅಂಗಿಯನ್ನು ಹಾಕಿಕೊಂಡು ಬಂದಿರಲಿಲ್ಲ ; ಮರೆತು ಬೇರೆ ಅಂಗಿ ಹಾಕಿಕೊಂಡು ಬಂದಿದ್ದರು. ಅದನ್ನು ಕೇಳಿದ ವೃದ್ಧೆ, ''ಅದರಿಂದ ಏನು ತೊಂದರೆ? ಸಾಯಂ ಕಾಲ ಇಲ್ಲಿಗೆ ಬಂದು, ಹಣ ಕೊಟ್ಟು ಹೋಗಿಬಿಡಿ'' ಎಂದಳು. ಆದರೆ ಸಂಜೆಯ ಹೊತ್ತಿಗೆ ಅಲ್ಲಿಗೆ ಹೋಗಿ ನೋಡಿದರೆ, ಅಲ್ಲಿ ವೃದ್ಧೆಯ ಸುಳಿವೇ ಇಲ್ಲ. ಅಷ್ಟೇ ಅಲ್ಲ, ಆ ಕೊಳವೂ ಅಲ್ಲಿ ಕಂಡು ಬರಲಿಲ್ಲ. ಅಕ್ಕಪಕ್ಕದ ಜನರನ್ನು ವಿಚಾರಿಸಿದಾಗ ತಿಳಿದು ಬಂತು, ಅಲ್ಲಿ ಅಂತಹ ವೃದ್ಧೆ ಯಾರೂ ಇಲ್ಲ, ಹಾಗೂ ಅಂತಹ ಕೊಳವೂ ಅಲ್ಲಿ ಎಂದಿಗೂ ಇರಲಿಲ್ಲ ಎಂಬುದಾಗಿ. ನನಗನ್ನಿಸುತ್ತದೆ,



ಶ್ರೀಮಾತೆ ಯವರ ಅಲೌಕಿಕ ಶಕ್ತಿ ಪ್ರಕಟಗೊಳ್ಳುವುದನ್ನು ನೋಡುವ ಆಸೆಯಿಂದಿದ್ದ ಅವರ ಮನಸ್ಸಿನ ಬಯಕೆಯನ್ನು ಪೂರೈಸ ಲೆಂದೇ 'ಅಘಟನ-ಘಟನಾ-ಪಟೀಯಸೀ' ಮಾತೆಯು ಈ ರೀತಿಯ ಘಟನೆ ಘಟಿಸುವಂತೆ ಮಾಡಿದ್ದಾಳೆ — ಎಂಬುದಾಗಿ.

* * *

ಇನ್ನೊಂದು ಸಲ ಡಿಸೆಂಬರ್ ತಿಂಗಳಲ್ಲಿ ಶ್ರೀಶಚಂದ್ರ ಘಟಕ್, ಸುರೇಂದ್ರನಾಥ ಸರ್ಕಾರ್ ಹಾಗೂ ಇಂದುಭೂಷಣ ಸೇನಗುಪ್ತ ಇವರು ಶಿಲ್ಲಾಂಗ್‌ನಿಂದ ಜಯರಾಮಬಾಟಿ ಯಲ್ಲಿದ್ದ ಶ್ರೀಮಾತೆಯವರ ಬಳಿಗೆ ಹೊರಟಿದ್ದರು. ದಾರಿ ಯಲ್ಲಿ ಬರುತ್ತಿದ್ದ ಹಾಗೆ, ಜಯರಾಮಬಾಟಿಯಲ್ಲಿ ಶ್ರೀಮಾತೆ ಯವರಿಂದ ಪಿಠಾ (ಒಂದು ಬಗೆಯ ತಿಂಡಿ) ತಿನ್ನಬೇಕೆಂಬ ಆಸೆಯುಂಟಾಯಿತು. ಅವರು ತಮ್ಮಲ್ಲೇ ಈ ಕುರಿತು ಮಾತ ನಾಡಿಕೊಂಡರು; ಆದರೆ ಬೇರೆ ಯಾರಿಗೂ ಹೇಳಲಿಲ್ಲ. ಜಯ ರಾಮಬಾಟಿಗೆ ತಲುಪಿದ ನಂತರ ಪ್ರಸಾದ (ಭೋಜನ)

ಸ್ವೀಕರಿಸುತ್ತಿದ್ದಾಗ ಆಶ್ಚರ್ಯಚಕಿತರಾಗಿ ನೋಡುತ್ತಾರೆ, ಅಂದು ಪ್ರಸಾದದಲ್ಲಿ ಪಿಠಾ ಕೂಡ ಇತ್ತು. ಅಷ್ಟೇ ಅಲ್ಲ , ಪಿಠಾ ಬಡಿಸುತ್ತಿದ್ದಾಗ ಅವರ ಎಲೆಗೇ ಮೊದಲು ಬಡಿಸಲಾಯಿತು. ವಿಸ್ಮಯ ಹಾಗೂ ಆನಂದದಿಂದ ಭಕ್ತರ ಹೃದಯ ತುಂಬಿಬಂತು, ಕಣ್ಣುಗಳಲ್ಲಿ ನೀರು ತುಂಬಿಬಂತು.

* * *

ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮೀಜಿಯವರ ಆದರ್ಶಗಳಿಂದ ಆಕರ್ಷಿತರಾದ ಭಕ್ತರುಗಳು ಸೇರಿಕೊಂಡು ಶಿಲ್ಲಾಂಗ್‌ನಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ಅಲ್ಲಿ ನಿಯತವಾಗಿ 'ಶ್ರೀರಾಮಕೃಷ್ಣ ಕಥಾಮೃತ'ದ (ವಚನವೇದ) ವಾಚನ, ಭಕ್ತಿ ಸಂಗೀತ ಇತ್ಯಾದಿ ಗಳು ನಡೆಯುತ್ತಿದ್ದವು. ಒಂದು ಸಲ ಅವರು ಅಖಂಡ ಮಾತೃ– ಸಂಗೀತವನ್ನು ಹಾಡಲಾರಂಭಿಸಿದರು. ಆಗ ಶ್ರೀಮಾತೆಯವರು ಉದ್ಬೋಧನದಲ್ಲಿದ್ದರು. ಅವರು ಏನನ್ನೂ ಶ್ರೀಮಾತೆಯವ ರಿಗೆ ತಿಳಿಸಿರಲಿಲ್ಲ. ಎರಡು–ಮೂರು ದಿನಗಳಿಂದ ಸಾಕಷ್ಟು ಮಾತೃ–ಸಂಗೀತ ಭಜನೆ ನಡೆಯುತ್ತ ಬಂದಿತ್ತು. ಅತ್ತ ಕಲ್ಕತ್ತೆ ಯಲ್ಲಿ , ಉದ್ಬೋಧನದಲ್ಲಿದ್ದ ಶ್ರೀಮಾತೆ ಹಠಾತ್ತನೆ ಚಂಚಲ ಚಿತ್ತರಾಗಿಬಿಟ್ಟರು. ಒಬ್ಬ ಸೇವಕನನ್ನು ಕರೆದು, ''ಇನ್ನು ಸಹಿಸ ಲಾರೆ. ಶಿಲ್ಲಾಂಗ್‌ನ ಭಕ್ತರು ಹಾಡುತ್ತಿರುವ ಭಜನೆ, ಕೀರ್ತನೆ ನನ್ನ ಕಿವಿಯನ್ನು ಕಿವುಡಾಗಿಸಿಬಿಟ್ಟಿದೆ! ಅವರಿಗೆ ನಿಲ್ಲಿಸುವುದಕ್ಕೆ ಹೇಳು. ~~ಟೆಲಿಗ್ರಾಂ ಕಳುಹಿ~~ಸು!'' ಎಂದರು.[∩]

∩ ಶ್ರೀಮಾತೆಯವರ ಶಿಷ್ಯ ಶ್ರೀಶಚಂದ್ರ ಸನ್ಯಾಲರು ಈ ಲೇಖನವನ್ನು ೧೯೮೫ರ ಜುಲೈ ೨೧ರಂದು 'ಮಾಯೇರ್ ಪದಪ್ರಾಂತೇ'

# ಶ್ರೀಮಾತೆಯವರ ಕರುಣೆ

**ಧೀರೇಂದ್ರಕುಮಾರ ಗುಹ ಠಾಕೂರತಾ**

ಕ್ರಿ.ಶ.೧೯೧೯ರ ಜನವರಿ ೨ನೇ ತಾರೀಕು. ಬೇಲೂರು ಮಠದಲ್ಲಿ ಪೂಜ್ಯ ಬಾಬುರಾಮ ಮಹಾರಾಜರು ಕೃಷ್ಣಲಾಲ್ ಮಹಾರಾಜರಿಗೆ (ಸ್ವಾಮಿ ಧೀರಾನಂದ) ಹೇಳಿದರು: ''ಕೇಷ್ಟೋಲಾಲ್ [∩] ಧೀರೇನ್‌ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗಿ, 'ಬಲಿ' ಕೊಟ್ಟು ಕರೆದುಕೊಂಡು ಬಾ.'' ನನಗೆ ತಂದೆಯಿಲ್ಲ , ತಾಯಿ ಕೂಡ ಬಹಳ ದಿನಗಳ ಮುನ್ನ ತೀರಿಕೊಂಡಿದ್ದರು. ನನಗೆ ಯಾವುದರಲ್ಲೂ ಆಸಕ್ತಿಯಿಲ್ಲ. ನನ್ನ ಮನಸ್ಸಿನಲ್ಲಿ ಒಂದೇ ಆಲೋಚನೆ — ಎಲ್ಲಿಗೆ ಹೋಗಲಿ, ಕಳೆದುಕೊಂಡ ತಾಯಿಯನ್ನು ಹೇಗೆ ಪಡೆಯಲಿ ಎಂದು. ತಾಯಿಯಿಲ್ಲದ ಹುಡುಗನ ಮರ್ಮವೇದನೆ ಯಾರಿಗೂ ಅರ್ಥವಾಗದು.

ನಿಜಕ್ಕೂ 'ಬಲಿ' ಅದು. ನಾವು ಪೂರ್ವ ಬಂಗಾಳ (ಈಗಿನ ಬಾಂಗ್ಲಾದೇಶ) ದವರು. ನನ್ನ ಮನೆಯಿದ್ದುದು ಬರಿಸಾಲ್‌ನಲ್ಲಿ. ಆದ್ದರಿಂದ 'ಬಲಿ'ಯ ಪರಿಚಯ ನನಗೆ ಚೆನ್ನಾಗಿ ಇತ್ತು. ಸರಸ್ವತೀ ಪೂಜೆಯಂದೂ ಕೂಡ ಆಡನ್ನು ಬಲಿಕೊಡುತ್ತಾರೆ.

'ಉದ್ಬೋಧನ'ದ ಮೆಟ್ಟಿಲುಗಳನ್ನು ಏರುತ್ತ ಮೇಲಂತಸ್ತಿಗೆ ಹೋದೆ. ಪೂಜ್ಯ ಶರತ್ ಮಹಾರಾಜ್ ಡೆಸ್ಕಿನ ಮುಂದೆ ಕುಳಿತು ಏನೋ ಬರೆಯುತ್ತಿದ್ದರು. ನಾನು ಮೆಟ್ಟಿಲಿನ ಬಳಿಗೆ ಹೋಗುತ್ತಿದ್ದಂತೆಯೆ, ನನ್ನನ್ನು ಕರೆದು ಹೇಳಿದರು: ''ಯಾರು ಅದು? ಶ್ರೀಮಾತೆಯವರ ಆರೋಗ್ಯ ಚೆನ್ನಾಗಿಲ್ಲ. ಹೋಗಬೇಡ.'' ಆದರೆ ಅವರು ನನ್ನನ್ನು ತಡೆಯಲು ಅದೆಷ್ಟು ಯತ್ನಿಸಿದರೂ, ನಾನು ಅವರನ್ನು ಬದಿಗೆ ತಳ್ಳಿ ಶ್ರೀಮಾತೆಯವರ ಬಳಿಗೆ ಹೋದೆ, 'ಉದ್ಬೋಧನ'ದ ದೇವರಕೋಣೆಯಲ್ಲಿ ಶ್ರೀಮಾತೆ ಕುಳಿತು ಪೂಜೆ ಮಾಡುತ್ತಿದ್ದರು. ನನ್ನನ್ನು ನೋಡಿದ ಕೂಡಲೇ ನಾನು ದೀಕ್ಷೆಗಾಗಿ ಬಂದಿರುವುದಾಗಿ ಅವರಿಗೆ ತಿಳಿಯಿತು. ಅವರು ಸ್ವಲ್ಪ ನಗುತ್ತ, 'ನಾಳೆ ಬಾ' ಎಂದರು.

ಮರುದಿನ ಜನವರಿ ೩. ಸ್ನಾನ ಮುಗಿಸಿ ಹೊರಟೆ. ಶ್ರೀಮಾತೆ ತಮ್ಮ ಎಡಭಾಗದಲ್ಲಿದ್ದ ಆಸನದಲ್ಲಿ ಕುಳಿತುಕೊಳ್ಳಲು ನನಗೆ ಹೇಳಿದರು. ಈ ಪ್ರದೇಶದಲ್ಲಿ ನವವಧುವನ್ನು ಕರೆಸಿಕೊಳ್ಳುವಾಗ ಇತ್ಯಾದಿ ಸಂದರ್ಭಗಳಲ್ಲಿ ಹೆಂಗಸರು ಹೇಗೆ ಗಲ್ಲವನ್ನು ಸ್ಪರ್ಶಿಸಿ ಚುಂಬಿಸುತ್ತಾರೋ, ಹಾಗೆ ಶ್ರೀಮಾತೆ ನನ್ನ ಗಲ್ಲವನ್ನು ಸ್ಪರ್ಶಿಸಿ ಚುಂಬಿಸಿದರು; ಅನಂತರ ನನಗೆ ಗಂಗಾಜಲ ಸಿಂಪಡಿಸಿದರು. ನಾನು ಶ್ರೀಮಾತೆಯವರು ಮಾಡುತ್ತಿದ್ದ ಪೂಜೆಯನ್ನು ಮಂತ್ರಮುಗ್ಧನಾಗಿ ನೋಡಿದೆ: ಎದುರಿಗೆ ನೈವೇದ್ಯದ ತಟ್ಟೆ , ಹಣ್ಣುಹಂಪಲು, ಹೂಗಳು ಇದ್ದವು. ಸ್ವಲ್ಪ ಹೊತ್ತು ಶ್ರೀಮಾತೆ ಧ್ಯಾನ ಮಾಡಿ, ನಂತರ ನನ್ನತ್ತ ಪ್ರಸನ್ನ ದೃಷ್ಟಿಯಿಂದ ನೋಡುತ್ತ ಹೇಳಿದರು: ''ನೀವು ಶಾಕ್ತರೆ, ವೈಷ್ಣವರೆ?'' ''ನನಗೆ ಆರು ವರ್ಷವಾಗಿದ್ದಾಗ ನನ್ನ ತಾಯಿ ತೀರಿಕೊಂಡರು, ಹದಿನಾಲ್ಕನೇ ವಯಸ್ಸಿನಲ್ಲಿ ತಂದೆ ತೀರಿಕೊಂಡರು — ಹಾಗಾಗಿ ಅದೆಲ್ಲ ನನಗೆ ಗೊತ್ತಿಲ್ಲಮ್ಮಾ. ಆದರೆ ನನ್ನ ತಾಯಿ ತೀರಿಕೊಂಡಾಗ ಅವರ ತಲೆಯ ಬಳಿ ನನ್ನ ತಂದೆ ಕಾಳಿಯ ಮೂರ್ತಿಯನ್ನು ಇಟ್ಟಿದ್ದರು'' ಎಂದೆ. ಶ್ರೀಮಾತೆಯವರಿಗೆ ಅರ್ಥವಾಯಿತು. ನನ್ನ ಗಲ್ಲದ ಮೇಲೆ ಕೈಯ

∩ ಬಂಗಾಳಿಯಲ್ಲಿ 'ಕೃಷ್ಣ' ಎನ್ನುವುದನ್ನು ಆಡುಮಾತಿನಲ್ಲಿ 'ಕೇಷ್ಟೋ' ಎನ್ನುತ್ತಾರೆ, ಕನ್ನಡದಲ್ಲಿ 'ಕಿಟ್ಟಿ' ಎಂದಂತೆ. *( – ಅನು.)*